ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	746
ಸದಸ್ಯರ ಹೆಸರು:	ಡಾ.ವೈ.ಎ. ನಾರಾಯಣ ಸ್ವಾಮಿ
ಉತ್ತರಿಸುವ ದಿನಾಂಕ:	10-03-2020
ಉತ್ತರಿಸುವವರು:	ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರ
ಅ	ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಗೂಡಿಗೆ ನೀಡುತ್ತಿರುವ ಪ್ರೋತ್ಸಾಹಧನ ಎಷ್ಟು; ವಾರ್ಷಿಕವಾಗಿ ಈ ಯೋಜನೆಗಾಗಿ ಮೀಸಲಿಟ್ಟಿರುವ ಅನುದಾನದ ಮೊತ್ತವೆಷ್ಟು;	ರಾಜ್ಯದಲ್ಲಿ ಶುದ್ಧ ಮೈಸೂರು ತಳಿ ಮತ್ತು ದ್ವಿತಳಿ ಬಿತ್ತನೆ ಗೂಡು ಬೆಳೆಯುವ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಧನ ಕೆಳಕಂಡಂತೆ ವಿತರಿಸಲಾಗುತ್ತಿದೆ. 1. ಶುದ್ಧ ಮೈಸೂರು ತಳಿ ಮತ್ತು ದ್ವಿತಳಿ ಬಿತ್ತನೆ ಗೂಡಿಗೆ ಬೇಡಿಕೆ ಇಲ್ಲದೇ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದಾಗ ಪ್ರತಿ ಕೆ.ಜಿ. ಬಿತ್ತನೆ ಗೂಡಿಗೆ ರೂ.175ರಂತೆ ಪ್ರೋತ್ಸಾಹಧನ(ಬೋನಸ್) ನೀಡಲಾಗುತ್ತಿದೆ. 2. ಉತ್ಪಾದನೆ ಹಾಗೂ ಗುಣಮಟ್ಟದ ಆಧಾರದ ಮೇಲೆ ಪ್ರತಿ ಕೆ.ಜಿ. ಬಿತ್ತನೆ ಗೂಡಿಗೆ ರೂ.70 ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ. ಈ ಯೋಜನೆಗಾಗಿ 2019-20ನೇ ಸಾಲಿನಲ್ಲಿ ರೂ.1103.549ಲಕ್ಷ ಅನುದಾನ ನಿಗದಿಪಡಿಸಲಾಗಿದ್ದು, ಜನವರಿ2020ರ ಅಂತ್ಯಕ್ಕೆ ರೂ.1093.476ಲಕ್ಷಗಳ ಪ್ರೋತ್ಸಾಹಧನ/ಬೋನಸ್ ಮೊತ್ತವನ್ನು ಬಿತ್ತನೆ ಬೆಳೆಗಾರರಿಗೆ ವಿತರಿಸಲಾಗಿದೆ. ಆಗಿಂದಾಗ್ಗೆ ಬಿತ್ತನೆ ಬೆಳೆಗಾರರ ಬೇಡಿಕೆಯನುಸಾರ ವಂಟನೆ ನಿಗದಿಪಡಿಸಲಾಗುತ್ತದೆ.
ಆ	ಈ ಹಣವನ್ನು ರೈತರಿಗೆ ಪಾವತಿಸುವ ಪದ್ಧತಿ ಯಾವುದು;	ಬಿತ್ತನೆ ವಲಯದ ರೇಷ್ಮೆ ಗೂಡು ಮಾರುಕಟ್ಟೆಗಳಿಂದ ಪ್ರೋತ್ಸಾಹಧನ/ಬೋನಸ್ ಮೊತ್ತವನ್ನು ಇಸಿಎಸ್ ಮುಖಾಂತರ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪಾವತಿಸಲಾಗುತ್ತಿದೆ.
ಇ	ಇದುವರೆಗೆ ಮೇಲ್ಕಂಡ ಫಲಾನುಭವಿಗಳಿಗೆ ಸರ್ಕಾರದಿಂದ ಬರಬೇಕಾಗಿರುವ ಬಾಕಿ ಹಣ ಎಷ್ಟು?	ಬಾಕಿ ಇರುವುದಿಲ್ಲ.

ರೇಷ್ಮೆ 31 ರೇಕ್ರುವಿ 2020

(ನಾರಾಯಣಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು